ಒಬ್ಬರು 'ಇದೇನಣ್ಣ ಇವರು ಹೋಗಿ ಹೋಗಿ ಬಂಗಾರದಂತ ಹುಡುಗೀನ ಅದ್ಯಾರೊ ಬಿಳಿ ಕೊಕ್ಕರೆಗೆ ಕೊಡ್ತಾ ಇದ್ದಾರೆ?' ಎಂದರೆ ಇನ್ನೊಬ್ಬರು, 'ಅವರು ಕೊಡ್ತಾ ಇಲ್ಲಮ್ಮ ಹುಡುಗೀನೆ ಅಮೆರಿಕಕ್ಕೇ ಹೋಗಿ ಆ ಕೊಕ್ಕರೇನ ಹಿಡುಕೊಂಡು ಬಂದಿದೆಯಂತೆ' ಎಂದರು.

ಮುಹೂರ್ತದ ಕೊನೆ ಹಂತವನ್ನು ಕಣ್ಣು ತುಂಬಿಕೊಳ್ಳಲು ಎಲ್ಲರೂ ವಧು ವರರ ಸುತ್ತಲೂ ಮತ್ತು ಮುಂದುಗಡೆ ನೆರೆದಿದ್ದಾರೆ. ಎಲ್ಲವನ್ನು ಮತ್ತೊಮ್ಮೆ ನೋಡಿಕೊಂಡ ಜೋಯಿಸರು ಮೊದಲಿಗೆ ತೇಜಸ್ ಕೈಗೆ ಮಾಂಗಲ್ಯ ಕೊಟ್ಟು ಮಂತ್ರಗಳನ್ನು ಮಣಮಣ ಎಂದು ಹೇಳುತ್ತಿದ್ದಾರೆ. ಮಧ್ಯದಲ್ಲಿ ವಾದ್ಯಗೋಷ್ಠಿಯ ಕಡೆಗೆ ಕೈತೋರಿ `ಗಟ್ಟಿಮೇಳ... ಗಟ್ಟಿಮೇಳ..' ಎಂದರು. ಈಗಾಗಲೇ ಗಟ್ಟಿಯಾಗಿ ಬಾರಿಸುತ್ತಿದ್ದ ವಾದ್ಯಗಾರರು ಮತ್ತಷ್ಟು ಗಟ್ಟಿಯಾಗಿ ಬಾರಿಸತೊಡಗಿದರು. ತೇಜಸ್ ಅದಿತಿಯ ಕೊರಳಲ್ಲಿ ಮಾಂಗಲ್ಯ ದಾರದಿಂದ ಮೂರು ಗಂಟಾಕಿದ. ಮತ್ತೆ ಅದು ಇದೂ ಸಂಪ್ರದಾಯ ಕೆಲಸಗಳು ನಡೆದ ಮೇಲೆ ಐದು ನಿಮಿಷಗಳು ಆಗಿ ಇನ್ನೊಂದು ಮಾಂಗಲ್ಯ ದಾರವನ್ನು ಜಾನ್ ಕೈಗೆ ಕೊಟ್ಟು ಅದನ್ನು ದಮಯಂತಿಯ ಕೊರಳಲ್ಲಿ ಹೇಗೆ ಕಟ್ಟಬೇಕೆಂದು ಮೊದಲು ತೋರಿಸಿಕೊಟ್ಟ ಮೇಲೆ ಅದೇ ರೀತಿ 'ಗಟ್ಟಿಮೇಳ... ಗಟ್ಟಿಮೇಳ...' ಎಂದರು. ಅಲ್ಲಿಗೆ ಎರಡು ಮದುವೆಗಳು ನೆರವೇರಿದವು. ವಧು ವರರ ಸುತ್ತಲೂ ನೆರೆದಿದ್ದ ಜನರೆಲ್ಲ ಮುಹೂರ್ತ ಮುಗಿದಿದ್ದೆ ಅಕ್ಷತೆ ಕಾಳುಗಳನ್ನು ವಧು ವರರ ಮೇಲೆ ಎಸೆದು ನಿರಾಳವಾಗಿ ಮಾತನಾಡುತ್ತ ಬಂದ ಕೆಲಸ ಮುಗಿದು ಫ್ರೀ ಆಗಿಬಿಟ್ಟರು. ಡೈನಿಂಗ್ ಹಾಲ್‌ನಲ್ಲಿ ಊಟ ತಯಾರಾಗಿದ್ದರಿಂದ ಕೆಲವು ಜನರು ಡೈನಿಂಗ್ ಹಾಲ್ ಕಡೆಗೆ ಹೊರಟರೆ ಉಳಿದವರು ಕುಳಿತು ನಿಂತು ಮಾತನಾಡುತ್ತಿದ್ದರು.

ಮತ್ತೆ ಆರತಕ್ಷತೆಗೆ ಎಲ್ಲರೂ ತಯಾರಾಗಲು ಪ್ರಾರಂಭಿಸಿದರು. ವಧುವರರ ಶೃಂಗಾರ ಮತ್ತೆ ಪ್ರಾರಂಭವಾಗಿತ್ತು. ಅದೂ ಕೂಡ ಇಬ್ಬರೂ ವಧುಗಳಿಗೆ ಮೇಕಪ್ ಮಾಡಲು ವಿಶೇಷವಾಗಿ ಬ್ಯೂಟಿ ಪಾರ್ಲರ್‌ಗಳಿಂದ ಮಹಿಳೆಯರು ಬಂದು ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಉಳಿದ ಮಹಿಳೆಯರೂ ಅದೇ ಕೆಲಸದಲ್ಲಿ ತೊಡಗಿಕೊಂಡಿದ್ದರು. ಗಂಡಸರೂ ಸಹ ತಾವೂ ಏನೂ ಕಡಿಮೆ ಇಲ್ಲ ಎಂಬಂತೆ ಮೇಕಪ್ ಮಾಡಿಕೊಳ್ಳುತ್ತ ಬಟ್ಟೆಗಳನ್ನು ಧರಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಸಾಯಂಕಾಲವಾಗಿದ್ದೇ ಮೊದಲಿಗೆ ಗಂಡಸರು ಅನಂತರ ಮಹಿಳೆಯರು ಹೋಟೆಲ್ ಕೋಣೆಗಳಿಂದ ಆರತಕ್ಷತೆ ನಡೆಯುವ ಹಾಲ್ ಕಡೆಗೆ ಹೊರಟರು. ಎಲ್ಲರೂ ಅವರವರ ಉತ್ತಮ ದಿರಿಸುಗಳನ್ನು ಧರಿಸಿ ಬರುತ್ತಿದ್ದರು. ಕೊನೆಗೆ ಆರತಕ್ಷತೆಯೂ ಮುಗಿದು ಹೋಗಿತ್ತು. ಅದೇ ರಾತ್ರಿಯೇ ಎರಡೂ ಜೋಡಿಗಳನ್ನು ಎರಡು ವಿಶೇಷ ಕೋಣೆಗಳಿಗೆ ಬಿಟ್ಟು ಮೊದಲ ರಾತ್ರಿಯ ಸಂಪ್ರದಾಯವನ್ನು ಮುಗಿಸಲಾಯಿತು. ಅಲ್ಲಿಗೆ ಎರಡೂ ಮದುವೆಗಳು ಮುಗಿದು ಎರಡೂ ಕಡೆಯ ಕುಟುಂಬಗಳು ನಿರಾಳವಾಗಿಬಿಟ್ಟರು.

ಸಾಲದ್ದಕ್ಕೆ ದೆಹಲಿಯಲ್ಲಿ ನಡೆದ ಅರತಕ್ಷತೆಗೂ ನಾವೆಲ್ಲ ಹೋಗಿಬಂದಿದ್ದೆವು. ಎರಡೂ ಜೋಡಿಗಳು ಬೆಂಗಳೂರಿನ ನಮ್ಮ ನೆಂಟರಿಷ್ಟರ ಮತ್ತು ನಮ್ಮ ಊರಿಗೂ ಹೋಗಿ ಸುತ್ತಾಡಿಕೊಂಡು ಬಂದಿದ್ದರು. ಈ ನಡುವೆ ಕೊನೆಯ ಹತ್ತು ದಿನಗಳು ಎರಡೂ ಜೋಡಿಗಳು ಅಲ್ಲಿ ಇಲ್ಲಿ ಹೋಗಿ ಬರುವುದು ಮತ್ತು ಮನೆಯಲ್ಲಿ ನಿದ್ದೆ ಹೊಡೆಯುವುದೇ ಕೆಲಸ ಆಗಿಬಿಟ್ಟಿತ್ತು. ಸಾವಿತ್ರಿಗೆ ಆ ಹತ್ತು ದಿನಗಳು ಕಷ್ಟದ ದಿನಗಳಾಗಿ ಮಾರ್ಪಟ್ಟಿದ್ದವು. ಇಬ್ಬರೂ ಹೆಣ್ಣುಮಕ್ಕಳು ಎರಡು ಕೋಣೆಗಳನ್ನು ಬಿಟ್ಟು ಹೊರಕ್ಕೆ ಬರಲೇ ಇಲ್ಲ. ಬೆಳಿಗ್ಗೆಯಿಂದ ರಾತ್ರಿ ಹನ್ನೊಂದು ಗಂಟೆಯವರೆಗೂ ಸಾವಿತ್ರಿ ಅಡುಗೆ ಕೋಣೆಯಲ್ಲಿ ಬೆಳಗಿನ ತಿಂಡಿ, ಮಧ್ಯಾಹ್ನದ ಅಡುಗೆ ಸಾಯಂಕಾಲದ ಕಾಫಿ, ಟೀ ಮತ್ತೆ ರಾತ್ರಿಯ ಅಡುಗೆಯನ್ನು ಮಾಡುತ್ತಲೇ ಇದ್ದಳು. ಅದಿತಿ ಒಂದು ಕಡೆಗಿರಲಿ ದಮಯಂತಿಯೂ ಅಡುಗೆ ಮನೆಗೆ ಬಂದು ಸಾವಿತ್ರಿಗೆ ಸಹಾಯ ಮಾಡಲಿಲ್ಲ. ಇಬ್ಬರೂ ಕುಳಿತುಕೊಂಡು ಮಲಗಿಕೊಂಡೇ ಸಮಯ ಕಳೆಯುತ್ತಿದ್ದರು. ಅಂತೂ ಒಂದು ದಿನ ಅಮೆರಿಕಗೆ ಎರಡೂ ಜೋಡಿಗಳು ವಿಮಾನದಲ್ಲಿ ಹಾರಿಹೋದ ಮೇಲೆ ಎಲ್ಲರಿಗಿಂತ ನನಗೆ ನೆಮ್ಮದಿಯಾಯಿತು.

***

ನನ್ನ ಮಗ ತೇಜಸ್ ಮತ್ತು ಮಗಳಾದ ದಮಯಂತಿಯ ಕಥೆಗಳನ್ನು ನಿಮಗೆ ಹೇಳುತ್ತ ಹೇಳುತ್ತ ನನಗೆ ಗೊತ್ತಿಲ್ಲದೆಯೆ ನಿದ್ದೆಗೆ ಜಾರಿಕೊಂಡಿದ್ದೆ. ಆ ನಿದ್ದೆ ಬಹಳ ವಿಶೇಷವಾಗಿದ್ದು ನಿಮ್ಮನ್ನೂ ನನ್ನ ನಿದ್ದೆಯ ಜೊತೆಗೆ ಕರೆದುಕೊಂಡು ಹೋಗುತ್ತೇನೆ. ಇದು ಎಷ್ಟೋ ವರ್ಷಗಳಿಂದ ನನ್ನ ತಲೆಯಲ್ಲಿ ಸಂಚರಿಸುತ್ತಿದ್ದ ದೆವ್ವಗಳೊ? ಆತ್ಮಗಳೊ? ಇಲ್ಲ ಪ್ರೇತಾತ್ಮಗಳ ಬಗೆಗಿನ ಊಹೆಗಳೊ ಅಥವಾ ಕಥೆಗಳೊ ನನಗೆ ಗೊತ್ತಿಲ್ಲ. ದೆವ್ವಗಳು ಸತ್ತವರ ಆತ್ಮಗಳು, ಇಲ್ಲ ಪ್ರೇತಗಳು. ಇವು ಸಾಮಾನ್ಯವಾಗಿ ಅಸ್ವಾಭಾವಿಕವಾದ ಜೀವಿಗಳಾಗಿದ್ದು ದುಷ್ಕೃತ್ಯಗಳನ್ನು ಎಸಗುತ್ತವೆ. ಸತ್ತ ಜನರು ಸಾಮಾನ್ಯವಾಗಿ ದೆವ್ವಗಳಾಗಿ ಅಥವಾ ಪ್ರೇತಗಳಾಗಿ ಅಲೌಕಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಜನರ ಬದುಕಿನಲ್ಲಿ ತೊಂದರೆಯನ್ನು ಉಂಟು ಮಾಡುತ್ತವೆ. ಆತ್ಮ ಮತ್ತು ಪ್ರೇತಗಳು ನಡುವಿನ ದುಷ್ಕೃತ್ಯಗಳು ಯಾವುವು ಎಂಬ ಗೊಂದಲ ಜನರ ನಡುವೆ ಸಂದೇಹಕ್ಕೆ ಎಡೆಮಾಡಿದೆ. ದೆವ್ವಗಳು ಮತ್ತು ಆತ್ಮಗಳು ಬೇರೆ ಬೇರೆ ಎಂದು ಹೇಳಲಾಗುತ್ತದೆ.

ಸಾಂಪ್ರದಾಯಿಕ ನಂಬಿಕೆಗಳು ಮತ್ತು ಜನಪದ ಕಥೆಗಳ ಪ್ರಕಾರ ದೆವ್ವಗಳು ಸತ್ತವರ ಆತ್ಮಗಳು. ದೆವ್ವಗಳು ಗೋಚರ, ಅಗೋಚರವಾಗಿ, ಜೀವಂತವಾಗಿ ಯಾವುದೇ ರೀತಿಯಲ್ಲಿ ಕಾಣಿಸಿಕೊಳ್ಳಬಹುದು. ಅಥವಾ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು. ಈ ದೆವ್ವಗಳು ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಕಾಣಿಸದೆ ಸದ್ದು ಮಾಡುತ್ತ, ಇಲ್ಲ ತಾವು ಬದುಕಿದ್ದಾಗಿನ ನಿಜ ರೂಪದಲ್ಲಿ ಇದ್ದಂತೆ, ಕೊಳ್ಳಿಗಳನ್ನು ಬೆಳಗಿಸುತ್ತ ಕಾಣಿಸಿಕೊಳ್ಳುತ್ತವೆ. ಇವುಗಳನ್ನು ಕೊಳ್ಳಿ ದೆವ್ವಗಳು ಎನ್ನಲಾಗುತ್ತದೆ. ಮನುಷ್ಯ ಬದುಕಿದ್ದಾಗ ಒಳ್ಳೆಯವನಾಗಿದ್ದರೂ ಸತ್ತ ಮೇಲೆ ಆತನ ಆತ್ಮ ಅಥವಾ ಪ್ರೇತಗಳು ಜನರಿಗೆ ಹೆಚ್ಚು ತೊಂದರೆ ಮಾಡುತ್ತವೆ. ಜನರು ಸಾಯುವುದಕ್ಕೆ ಮುಂಚೆ ಅಥವಾ ಸಾಯುವಾಗ ಅಶಾಂತವಾಗಿ ಪ್ರಾಣ ಕಳೆದುಕೊಂಡು ದೆವ್ವಗಳಾದಾಗ ಹೆಚ್ಚು ತೊಂದರೆ ಮಾಡುತ್ತವೆ. ಪ್ರೇತಗಳು ಸತ್ತ ಮೇಲೂ ಮಾನವ ಜಗತ್ತಿನೊಂದಿಗೆ ಸಂಬಂಧ ಹೊಂದಿರುತ್ತವೆ. ಮನುಷ್ಯರು ಬದುಕಿದ್ದಾಗ ಕೆಲವು ಕೆಲಸಗಳನ್ನು ಮಾಡಲಾರದೆ ಸತ್ತುಹೋಗಿರುವ ಕಾರಣ ಅವು ಬಹಳ ಅಪಾಯಕಾರಿ ಮತ್ತು ಪ್ರಕ್ಷುಬ್ಧವಾಗಿ ನಡೆದುಕೊಳ್ಳುತ್ತವೆ. ಇಂತಹ ದೆವ್ವಗಳ ಆತ್ಮಗಳನ್ನು ಮನುಷ್ಯರು ಸಂಪರ್ಕಿಸುವ ವಿಧಾನವನ್ನು **necromancy or sance** ಎಂದು ಕರೆಯಲಾಗುತ್ತದೆ. ದೆವ್ವಗಳು ಸಾಮಾನ್ಯವಾಗಿ ತಾವು ಬದುಕಿದ್ದ ಅಥವಾ ಓಡಾಡುತ್ತಿದ್ದ ಪ್ರದೇಶಗಳಲ್ಲಿ ಹೆಚ್ಚು ಕಾಲ ಬದುಕಿರುತ್ತವೆ. ಮತ್ತು ಅವುಗಳ ಬದುಕಿನಲ್ಲಿ ಉಪಯೋಗಿಸುತ್ತಿದ್ದ ವಸ್ತುಗಳು ಮತ್ತು ಜನರನ್ನು ಭೇಟಿಯಾಗುತ್ತಿರುತ್ತವೆ ಎಂದು ಹೇಳುತ್ತಾರೆ.

ಆದರೆ ವೈಜ್ಞಾನಿಕ ಸಂದೇಹಗಳನ್ನು ಹೊಂದಿರುವ ವಿಜ್ಞಾನಿಗಳು ಹೇಳುವುದೇ ಬೇರೆ. ಇದೆಲ್ಲ ದೃಷ್ಟಿ ಭ್ರಮಣೆ ಅಥವಾ ಮನಸ್ಸಿನಲ್ಲಿನ ಭ್ರಾಂತಿಯ ಪರಿಣಾಮ ಎನ್ನುತ್ತಾರೆ. ಮನುಷ್ಯನಲ್ಲಿನ ಹಾರ್ಮೋನುಗಳ ಬದಲಾವಣೆಯಿಂದ, ಅಥವಾ ಮನುಷ್ಯನ ಬದುಕಿನಲ್ಲಿ ಯಾವುದೋ ಒಂದು ದೊಡ್ಡ ಬದಲಾವಣೆಯಿಂದ, ಆರೋಗ್ಯದ ಏರುಪೇರಿನಿಂದ, ಕಣ್ಣುಗಳ ಎದುರಿಗೆ ಇಲ್ಲದೆ ಇರುವ ವಸ್ತುಗಳು ಎದುರಿಗೆ ಇದ್ದಂತೆ ಕಾಣಿಸುತ್ತವೆ. ಕೆಲವೊಮ್ಮೆ ನಮ್ಮ ಕಣ್ಣುಗಳೇ ನಮಗೆ ಮೋಸ ಮಾಡುತ್ತವೆ. ಇದಕ್ಕೆಲ್ಲ ಕಾರಣ ಮನುಷ್ಯನ ದೇಹದೊಳಗೆ ನಡೆಯುವ ಕೆಲವು ವಿಚಿತ್ರ ಪ್ರಕ್ರಿಯೆಗಳು. ಇನ್ನೊಂದು ವಿಷಯವೆಂದರೆ ಮನುಷ್ಯರು ತಾವು ಬದುಕಿದ್ದಾಗ ಮಾಡುತ್ತಿದ್ದ ಕೆಲಸಗಳನ್ನು ಸತ್ತ ಮೇಲೆ ದೆವ್ವಗಳಾಗಿ ಮಾಡುತ್ತವೆ. ಕೆಲವೊಮ್ಮೆ ಅವು ಹೊಸ ಮನೆಗಳನ್ನು, ಗೋಡೆಗಳನ್ನು ಕಟ್ಟಿದ ಮೇಲೆಯೂ ಅವುಗಳ ಮೂಲಕ ಅನಾಯಾಸವಾಗಿ ನಡೆದಾಡುತ್ತವೆ. ಕೆಲವೊಮ್ಮೆ ದೀಪಗಳನ್ನು ಹೊತ್ತಿಸಿಕೊಂಡು ಓಡಾಡುವುದು, ಪಾತ್ರೆಗಳನ್ನು ತೊಳೆಯುವುದು, ಒಲೆ ಹೊತ್ತಿಸಿಕೊಂಡು ಅಡುಗೆ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿರುತ್ತವೆ. ಇವೆಲ್ಲ ದೆವ್ವಗಳು ಬದುಕಿದ್ದಾಗ ಮಾಡುತ್ತಿದ್ದ ಕೆಲಸಗಳೆ ಆಗಿರುತ್ತವೆ. ಇಂತಹ ಕೆಲಸಗಳೆಲ್ಲ ಮಾಡದೇ ಇರಲು ಅವುಗಳಿಗೆ ಅಡ್ಡಿ ಮಾಡದೇ ಇದ್ದರೆ ಕೆಲವು ದಿನಗಳು ಅಥವಾ ಕೆಲವು ವರ್ಷಗಳ ಕಾಲ ಅಂತಹ ಕೆಲಸಗಳನ್ನು ಮಾಡಿ ಮಾಡಿ ಅವೇ ಸುಮ್ಮನಾಗಿಬಿಡುತ್ತವೆ ಎನ್ನುತ್ತಾರೆ.

(ಸಶೇಷ)